

# ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

SARAYU - Kannada Monthly Regn. No. KARKAN/2014/62363
june Vol. : 5 Issue : 1 5120/ವಿಲಂಬಿ ಸಂವತ್ಸರ 2018 ಜೂನ್ ಪುಟ 4 Rs. 10/-

Postal Regn No. PTR/135/2016-18
Licensed to Post without pre-payment
License No: SK/WPP/PTR/177/2016-18

## 1988 – 2018 ಶ್ರೀರಾಮ ಪ್ರಾಥಮಿಕ ಶಾಲೆ 30 ವರ್ಷಗಳು....

1988 –89ನೇ ಶೈಕ್ಷಣಿಕ ವರ್ಷದಲ್ಲಿ ಆರಂಭಗೊಂಡ ಶ್ರೀರಾಮ ಪ್ರಾಥಮಿಕ ಶಾಲಾ ವಿಭಾಗವು ಇಂದು ತನ್ನ ಮೂವತ್ತರ ಹರೆಯವನ್ನು ಪೂರೈಸಿದ ಸಂಭ್ರಮದಲ್ಲಿದೆ. ಕೇವಲ 55 ಸಂಖ್ಯೆಯಿಂದ ಆರಂಭಗೊಂಡ ಈ ವಿಭಾಗ ಇಂದು 1160 ಸಂಖ್ಯೆಯನ್ನು ಮೀರಿ ನಿಂತಿದೆ. ಗ್ರಾಮೀಣ ಪ್ರದೇಶದಲ್ಲಿ ಕನ್ನಡ ಮಾಧ್ಯಮ ಶಾಲೆಯೊಂದು ತನ್ನೊಡಲಲ್ಲಿ ಇಷ್ಟು ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳನ್ನು ಇರಿಸಿಕೊಂಡು ಬೆಳೆಯುತ್ತಿರುವುದಕ್ಕೆ ಇಲ್ಲಿ ನೀಡುವ ಮೌಲ್ಯಶಿಕ್ಷಣವೇ ಪ್ರಮುಖ ಕಾರಣ. ಮೂವತ್ತು ತುಂಬಿದ ಹಿನ್ನೆಲೆಯಲ್ಲಿ ಈ ಶೈಕ್ಷಣಿಕ ವರ್ಷ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

### ಪೂರ್ವಗುರುಕುಲ ಶಿಕ್ಷಕರ ಕಾರ್ಯಾಗಾರ:

ದಿನಾಂಕ 24–05–2018 ರಿಂದ 26–05–2018ರ ವರೆಗೆ ಪೂರ್ವಗುರುಕುಲ ಕಾರ್ಯಗಾರವು ಶ್ರೀರಾಮ ಪದವಿ ವಿಭಾಗ ಸಾಧನಾ ಸಭಾ ಭವನದಲ್ಲಿ ನಡೆಯಿತು. ಈ ಕಾರ್ಯಗಾರದಲ್ಲಿ ಇತಿಹಾಸ ವಿಜ್ಞಾನ, ಭಾಷಾಕಲಿಕೆ, ಕಥೆ, ಅಭಿನಯಗೀತೆ ಹಾಗೂ ಪೂರ್ವಗುರುಕುಲದ ಪರಿಕಲ್ಪನೆಯ ಬಗ್ಗೆ ಹಿರಿಯರಿಂದ ಮಾರ್ಗದರ್ಶನ ಲಭಿಸಿತು. 8 ಶಾಲೆಗಳ 53 ಅಧ್ಯಾಪಕರು ಇದರ ಪ್ರಯೋಜನ ಪಡೆದುಕೊಂಡರು.





### ಪ್ರಾಥಮಿಕ ಶಾಲಾ ಪ್ರಾರಂಭೋತ್ಸವ:

2018–19ನೇ ಶೈಕ್ಷಣಿಕ ವರ್ಷದ ಮೊದಲ ದಿನವಾದ 29.05.2017ರಂದು ವೇದವ್ಯಾಸ ಧ್ಯಾನಮಂದಿರದಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ಮಾತಾಜಿಯವರು ಆರತಿ ಬೆಳಗಿ, ತಿಲಕವಿಟ್ಟು, ಅಕ್ಷತೆಹಾಕಿ, ಸಿಹಿ ತಿನ್ನಿಸಿ ಬರಮಾಡಿಕೊಂಡರು. ಈ ವರ್ಷದ ವಿದ್ಯಾಭ್ಯಾಸವು ಉತ್ತಮವಾಗಿ ಸಾಗಲಿ ಎಂದು ಹಾರೈಸಿದರು. ವಿದ್ಯಾಕೇಂದ್ರದ ಹಿರಿಯರು, ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.

### ಪ್ರೌಢಶಾಲಾ ಪ್ರಾರಂಭೋತ್ಸವ ದಿ:29.05.2018

"ಶಿಕ್ಷಣವೆಂದರೆ ಕೇವಲ ಪುಸ್ತಕದ ಓದಿಗೆ ಸೀಮಿತವಲ್ಲ. ಬದಲಾಗಿ ವಿದ್ಯಾರ್ಥಿಯು ತನ್ನ ಜೀವನದಲ್ಲಿ ಪ್ರತಿಕ್ಷಣವೂ ಉತ್ತಮ ಅಂಶಗಳನ್ನು ಗುರುತಿಸಿ, ಅಳವಡಿಸಿ ಶ್ರೇಷ್ಠ ವ್ಯಕ್ತಿತ್ವ ರೂಪಿಸಿಕೊಳ್ಳುವುದಾಗಿದೆ" ಎಂದು ಸಂಚಾಲಕರಾದ ಶ್ರೀ ವಸಂತ ಮಾಧವ ತಿಳಿಸಿದರು.

ವಿದ್ಯಾರ್ಥಿಗಳು ಭಾರತ ಮಾತೆಗೆ ಪುಷ್ಪಾರ್ಚನೆಗೈದು ಹಿರಿಯರಿಂದ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ವೇದಿಕೆಯಲ್ಲಿರುವ ಗಣ್ಯರು ವಿದ್ಯಾರ್ಥಿಗಳಿಗೆ ಶಾಲಾ ವತಿಯಿಂದ ಉಚಿತವಾಗಿ ನೀಡುವ ಶಾಲಾ ಸಮವಸ್ತ್ರ, ಬರೆಯುವ ಪುಸ್ತಕ, ಪಠ್ಯಪುಸ್ತಕಗಳನ್ನು ವಿತರಿಸಿದರು.





### ರಾಮಾಯಣ, ಮಹಾಭಾರತ ತರಗತಿ ಉದ್ಘಾಟನೆ – 31.05.2018

ಶ್ರೀರಾಮ ಪ್ರೌಢಶಾಲಾ ವಿಭಾಗದ ರಾಮಾಯಣ ಹಾಗೂ ಮಹಾಭಾರತ ತರಗತಿಯನ್ನು ಮುಖ್ಯೋಪಾಧ್ಯಾಯರಾದ ಶ್ರೀಮತಿ ವಸಂತಿಕುಮಾರಿ ಉದ್ಘಾಟಿಸಿದರು. ಶ್ರೀ ಕಶೆಕೋಡಿ ಸೂರ್ಯನಾರಾಯಣ ಭಟ್ ಇವರು ತರಗತಿಯನ್ನು ನಡೆಸಿಕೊಡುತ್ತಿದ್ದು, 8ನೇ ತರಗತಿಯ ವಿದ್ಯಾರ್ಥಿಗಳು ರಾಮಾಯಣ ಹಾಗೂ 9ನೇ ತರಗತಿಯ ವಿದ್ಯಾರ್ಥಿಗಳು ಮಹಾಭಾರತದ ಮೌಲ್ಯದ ಬಗ್ಗೆ ತರಬೇತಿಯನ್ನು ಪಡೆಯುತ್ತಿದ್ದಾರೆ.

## ಎಸ್.ಎಸ್.ಎಲ್.ಸಿ ಯಲ್ಲಿ A ಗ್ರೇಡ್ (80% +) ಅಂಕ ಪಡೆದ ವಿದ್ಯಾರ್ಥಿಗಳು



ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಈಗಾಗಲೇ ಪ್ರಕಟಗೊಂಡಿದ್ದು, ಹಿಂದಿನ ಸಂಚಿಕೆಯಲ್ಲಿ 90%ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ವಿವರಗಳನ್ನು ತಮ್ಮೊಂದಿಗೆ ಹಂಚಿಕೊಂಡಿದ್ದೆವು. ಶೇ 80ಕ್ಕಿಂತ ಹೆಚ್ಚು ಅಂಕ ಪಡೆದ 43 ಮಂದಿ ವಿದ್ಯಾರ್ಥಿಗಳ ವಿವರ ಈ ಸಂಚಿಕೆಯಲ್ಲಿದೆ. ಸರಯೂ ಬಳಗ ಎಲ್ಲರನ್ನು ಮತ್ತೊಮ್ಮೆ ಅಭಿನಂದಿಸುತ್ತದೆ.


ಕೃಪಾ 561


ಸುಮಶ್ರೀ 558


ನವ್ಯಾ 557


ತೇಜಸ್ವಿನಿ 555


ಪ್ರತೀಕ್ಷಾ 554


ಸುಪ್ರಭಾ ವಿ.ಎಸ್ 551


ಅಕ್ಷತಾ ಜಿ. 547


ಅಭಿಷೇಕ್ 543


ಶ್ರೇಯಾ 537


ಕೃಷ್ಣಕಿರಣ್ 537


ಮಿಲಿಂದ 532


ಪ್ರಜ್ಞಾ 531


ರಕ್ಷಾ ಡಿ. ಶೆಟ್ಟಿ 530


ವಂಶಿ 529


ಸುಹಾಸ್ 529


ಸ್ವಪ್ನಾ 528


ವೀಕ್ಷಿತಾ 527


ನಿಶ್ಮಿತಾ 527


ಅರ್ಪಿತಾ 526


ಜ್ಯೋತಿ 524



ರಕ್ಷಿತ್ ಕುಮಾರ್ 523



ಯೋಗಿತ್ 521



ಸವಿತಾ 520



ಕಾರ್ತಿಕ್ 520



ರೇಶ್ಮಾ 519



ಶ್ರಾವ್ಯ 518



ಪ್ರಣಾಮ್ 518



ಹೇಮಾಕ್ಷಿ 518



ದಿಶಾ 517



ಚಿಂತನಾ 515



ಯೂಕಿದಾಮೆ 511



ರಾಜಶ್ರೀ 510



ಕವಿತಾ 509



ವಿಜಿತ್ 508



ಸೌಜನ್ಯ 508



ಪೂಜಾ ಜೆ. 508



ನಿರೀಕ್ಷಾ 508



ತೃಪ್ತಿ 506



ಮೀನಾ 506



ಸಾಕ್ಷಿ 505



ದೀಪಕ್ 505



ಕೌಶಿಕ್ 500



ಹರ್ಷಿತಾ 500

**ಅಭಿನಂದನೆಗಳು,**
**ನಿಮ್ಮ ಭವಿಷ್ಯ ಉಜ್ವಲವಾಗಲಿ ಎಂಬ ಹಾರೈಕೆ ನಮ್ಮದು**


**ಸಂಪಾದಕೀಯ ಮಂಡಳಿ**

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪೂರ್ಣಿಮಾ (ಶಿಶುಮಂದಿರ)
ರೂಪಕಲಾ (ಪ್ರಾಥಮಿಕ ಶಾಲೆ)
ಮನೋಜ್ (ಪ್ರೌಢಶಾಲೆ)
ಹರ್ಷಿತಾ (ಪಿ.ಯು.ಸಿ)
ಶೈಲಜಾ (ಪದವಿ)
ವಿನುತ ಎಸ್.ಎನ್. (ಮಕ್ಕಳ ಪುಟ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಟೂರು

## ಸಾಧನೆಗೆ ಅಡ್ಡಿಯಾಗಿಲ್ಲ ಅಂಗವೈಕಲ್ಯ (ವಿಕಲಚೇತನ ವಿದ್ಯಾರ್ಥಿಯ ಸಾಧನೆ)

ಈ ಬಾರಿಯ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ವಾಣಿಜ್ಯ ವಿಭಾಗದಲ್ಲಿ 577 (96%) ಅಂಕ ಪಡೆದು ಕಾಲೇಜಿಗೆ ಪ್ರಥಮ ಸ್ಥಾನಿಯಾದ ವಿದ್ಯಾರ್ಥಿ ಆದಿತ್ಯ. ಈತ 5ನೇ ತರಗತಿಯ ವಯಸ್ಸಿನಲ್ಲಿ ತನ್ನೆರಡು ಕಾಲುಗಳ ಶಕ್ತಿಯನ್ನು ಕಳಕೊಂಡು ನಡೆಯಲಾರದ ಸ್ಥಿತಿ ಇದ್ದರೂ ವಿದ್ಯೆ ಕಲಿಯುವ ಉತ್ಸಾಹ ಕಳಕೊಂಡಿಲ್ಲ. ಮನೆಯವರ ಸಹಕಾರ ಪ್ರೋತ್ಸಾಹದಿಂದ ವಿದ್ಯಾಭ್ಯಾಸ ಮುಂದುವರೆಸಿ ಇದೀಗ ಎಲ್ಲರೂ ಮೆಚ್ಚುವ ಸಾಧನೆ ಮೆರೆದಿದ್ದಾನೆ. ಪ್ರತಿನಿತ್ಯ ವೀಲ್‌ಚೇರ್‌ನಲ್ಲೇ ಕುಳಿತು ಅಧ್ಯಯನ ಮಾಡಿದ ಇವನಿಗೆ ಸಹಪಾಠಿಗಳು ನೆರವಾಗುತ್ತಿದ್ದರು. ಅವರುಗಳೇ ಮಧ್ಯಾಹ್ನದ ಊಟ ಬಡಿಸಿ ತಟ್ಟೆಯನ್ನು ತೊಳೆದು ಶುಚಿಗೊಳಿಸುತ್ತಿದ್ದರು. ಆಡಳಿತ ಮಂಡಳಿಯೂ ಆದಿತ್ಯನಿಗಾಗಿ ವಾಣಿಜ್ಯ ವಿಭಾಗವನ್ನು ತಳಅಂತಸ್ತಿನಲ್ಲಿಯೇ ವ್ಯವಸ್ಥೆ ಮಾಡಿತ್ತು.



**ಪದವಿಪೂರ್ವ ಪ್ರಾರಂಭೋತ್ಸವ 21.5.18**


ಹೊಸ ಶೈಕ್ಷಣಿಕ ವರ್ಷಕ್ಕೆ ದಾಖಲಾದ ವಿದ್ಯಾರ್ಥಿಗಳನ್ನು ಕಾಲೇಜಿನ ಪ್ರಾಧ್ಯಾಪಕರ ಸಮ್ಮುಖದಲ್ಲಿ ತಿಲಕವಿಟ್ಟು ಆರತಿ ಬೆಳಗಿ ಸ್ವಾಗತಿಸಲಾಯಿತು. ಭಗಿನಿ ಗಂಗಾ ಇವರು ದೀಪ ಪ್ರಜ್ವಲನಗೈದರು.






**2018–19ನೇ ಸಾಲಿನ ವಿಜ್ಞಾನ ಕೋಚಿಂಗ್ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸವು ಮಂಗಳೂರಿನ ಪ್ರಸಿದ್ಧ ಪ್ರವಾಸಿತಾಣವಾದ ಪಿಲಿಕುಳಕ್ಕೆ ದಿನಾಂಕ 18/5/18 ರಂದು ಆಯೋಜಿಸಿದ್ದು 66 ವಿದ್ಯಾರ್ಥಿಗಳೊಂದಿಗೆ 9 ಪ್ರಾಧ್ಯಾಪಕರು ಭಾಗವಹಿಸಿದ್ದರು.**

**13/5/18 ರಂದು ಪ್ರಕಟವಾದ ವಿಕ್ರಮ ವಾರಪತ್ರಿಕೆಯಲ್ಲಿ ಸಾಮಾಜಿಕ ಜಾಲತಾಣ ವಿಮರ್ಶಕರಾದ ಶ್ರೀ ಕಿರಣ್.ಕೆ.ಎಸ್ ಇವರು ಪದವಿಪೂರ್ವ ವಿಭಾಗದ 201–18ರ ಶೈಕ್ಷಣಿಕ ವರ್ಷದ ಸಾಧನೆಯ ಬಗ್ಗೆ ಪ್ರಕಟಗೊಂಡ ಲೇಖನ.**



ಕಿರಣ್ ಕೆ. ಎಸ್
ಸಾಮಾಜಿಕ ಜಾಲತಾಣ ವಿಮರ್ಶಕ
@KiranKS

### ಕಲ್ಲಡ್ಕ ಶ್ರೀರಾಮ ವಿದ್ಯಾ ಕೇಂದ್ರದ ಫಲಿತಾಂಶ 98%.

ಕರ್ನಾಟಕವು ಇಡೀ ದಕ್ಷಿಣ ಭಾರತದಲ್ಲಿ ಅತ್ಯಂತ ಕಳಪೆ ಗ್ರಾಮೀಣ ವಿದ್ಯುತ್ ವಿತರಣಾ ಸೌಲಭ್ಯ ಹೊಂದಿರುವ ಸುದ್ದಿಯನ್ನು ನೋಡಿ 'ನಮ್ಮ ಹಳ್ಳಿಗಳಲ್ಲಿ ಅತಿಯಾದ ಲೋಡ್ ಶೆಡ್ಡಿಂಗ್ ಆದರೇನು? ನಮ್ಮ ವಿದ್ಯುತ್ ಮಂತ್ರಿ ಅತಿಯಾದ ಶ್ರೀಮಂತರಾಗಿದ್ದಾರೆ. ಡಿ.ಕೆ. ಶಿವಕುಮಾರ್ ಅವರು 800 ಕೋಟಿಗೂ ಹೆಚ್ಚು ಸಂಪತ್ತನ್ನು ಪ್ರಕಟಿಸಿಕೊಂಡಿದ್ದಾರೆ. ಕಳೆದ ಐದು ವರ್ಷಗಳಲ್ಲಿ ಅವರ ಸಂಪತ್ತು ದುಪ್ಪಟ್ಟಿಗಿಂತ ಹೆಚ್ಚಾಗಿದೆ. ಈ ದಾಖಲೆಯನ್ನು ಬೇರೆ ಯಾರಾದರೂ ಮುರಿಯಬಲ್ಲರೇ?' ಎಂದು ಅಶ್ವತ್ಥಾಮ ತಮ್ಮ ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಬೆಂಗಳೂರಿನ ಸಮೀಪದ ಟಿ.ಬೇಗೂರಿನಲ್ಲಿ ಕಳೆದ 44 ವರ್ಷಗಳಿಂದ ಸತತವಾಗಿ ಡಾ. ರಮಣ ರಾವ್ ನಡೆಸುತ್ತಿರುವ ಉಚಿತ ಕ್ಲಿನಿಕ್‌ನ ಬಗ್ಗೆ ವೀಡಿಯೋ ನೋಡಿ ಸಂಜಯ್ ಮುಲ್ಕೀಕರ್ ಅನ್ನುವವರು ಬಹಳ ಸಂತಸ ಪಟ್ಟರು. ಅದರಲ್ಲಿ ಡಾ. ರಾವ್ ಇದುವರೆಗೂ 20 ಲಕ್ಷಕ್ಕೂ ಹೆಚ್ಚು ರೋಗಿಗಳಿಗೆ ಉಚಿತ ಚಿಕಿತ್ಸೆ ಕೊಟ್ಟಿದ್ದಾರೆ ಅನ್ನುವ ಮಾಹಿತಿ ಇತ್ತು.

'ಇದು ಅದ್ಭುತ. ಅಂತಹ ಸಂತ ವ್ಯಕ್ತಿಯ ಮುಂದೆ ನನ್ನ ತಲೆ ಬಾಗುತ್ತದೆ. ಇಂತವರ ಸಂಖ್ಯೆ ಹೆಚ್ಚಲಿ ಎಂದು ನನ್ನ ಅಂಬೋಣ. ನನ್ನ ಮಗಳು ವೈದ್ಯೆ ಆಗಬೇಕು ಎಂದು ಹೇಳುತ್ತಿದ್ದಾಳೆ. ಈ ಸುದ್ದಿ ನೋಡಿ ನನಗೆ ಅವಳನ್ನು ಹೇಗೆ ಹುರಿದುಂಬಿಸಬಹುದು ಎಂದು ಆಲೋಚನೆ ಬಂದಿದೆ' ಎಂದಿದ್ದಾರೆ ಸಂಜಯ್ ಮುಲ್ಕೀಕರ್.

'ಇಲ್ಲಿ ನೋಡಿ. ಕರ್ನಾಟಕ ಎರಡನೆಯ ಪಿ.ಯು.ಸಿ. ಫಲಿತಾಂಶ 59.5% ಉತ್ತೀರ್ಣತೆ. ಆದರೆ (ಕಾಂಗ್ರೆಸ್ ಸರ್ಕಾರ ಕೊಲ್ಲೂರು ಮೂಕಾಂಬಿಕಾ ದೇವಾಲಯದಿಂದ ಬರುತ್ತಿದ್ದ ಮಧ್ಯಾಹ್ನದ ಊಟ ಕಸಿದುಕೊಂಡ) ಕಲ್ಲಡ್ಕದ ಶ್ರೀರಾಮ ವಿದ್ಯಾ ಕೇಂದ್ರದ ಫಲಿತಾಂಶ 98%. ಈ ಹಳ್ಳಿಯ ವಿದ್ಯಾಲಯ ಮಕ್ಕಳಿಗೆ ಭಾರತೀಯ ಸಂಸ್ಕೃತಿ, ದೇಶಭಕ್ತಿ, ಜೀವನ ಕೌಶಲ್ಯ ಮತ್ತು ಹುಮ್ಮಸ್ಸನ್ನು ಪರಿಪಾಠ ಮಾಡುತ್ತದೆ. ಇದನ್ನು ಆರ್.ಎಸ್.ಎಸ್. ಮುಖಂಡ ಡಾ. ಪ್ರಭಾಕರ್ ಭಟ್ ಅವರು ನಡೆಸುತ್ತಾರೆ. ಶುಭಾಶಯಗಳು!' ಎಂದು ತಮ್ಮ ಟ್ವೀಟರ್‌ನಲ್ಲಿ ಗಿರೀಶ್ ಆಳ್ವಾ ಬರೆದಿದ್ದಾರೆ.

'ಭಾರತದ ಪ್ರತಿಯೊಂದು ಹಳ್ಳಿಗೂ ವಿದ್ಯುತ್ ತಲುಪಿದೆ ಎಂಬ ಕೇಂದ್ರ ಸರ್ಕಾರದ ಘೋಷಣೆ ಕೇಳಿ ನನ್ನ ಹೃದಯ ತುಂಬಿ ಬಂದಿದೆ. ಪ್ರಧಾನಿ ಮೋದಿ ಅವರೆ, ಸಧ್ಯದಲ್ಲೇ ಭಾರತದ ಪ್ರತಿಯೊಂದು ಹಳ್ಳಿ ಬಯಲು ಶೌಚ ಮುಕ್ತವಾಗಲಿ ಮತ್ತು ಪ್ರತಿಯೊಂದು ಹಳ್ಳಿಯಲ್ಲಿ ಒಂದು ಆಯುರ್ವೇದದ ವೈದ್ಯರಿರಲಿ ಎಂದು ನನ್ನ ಹಾರೈಕೆ' ಎಂದು ರವಿಶಂಕರ್ ಟ್ವೀಟಿಸಿದ್ದಾರೆ.

Postal Regn No. PTR/135/2016-18 Licensed to Post without pre-payment License No: SK/WPP/PTR/177/2016-18

ಸರಯೂ

Vol. : 5 Issue : 1 Rs. 10/-

KARKAN/2014/62363
Posted at Kalladka P.O.
on 10th and 15th of
Every month

BOOK POST

ಸವಿಧೇ,

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Ph.: 08255-275273 / 275183 / 275073 / 275693 / 279673 / 200085 / 279479
Website : www.srvk.org E-mail : info@srvk.org

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 08255-275 273. Printed at Anagha Digital Square, Kaikamba, B.C. Road - 574 219, Bantwal Tq., Dakshina Kannada, Karnataka. Registration No. : KARKAN/2014/62363